**ದಿನಾಂಕ: 1ನೇ ಜುಲೈ, 2005ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ತೃತೀಯ ಸಭೆಯ ನಡವಳಿಗಳು**

ಸಭೆಗೆ ಹಾಜರಾದವರ ಪಟ್ಟಿಯನ್ನು ಅನುಬಂಧ 1 ರಲ್ಲಿ ನೀಡಲಾಗಿದೆ

ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತಾ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರು ಜರೂರು ಕಾರ್ಯನಿಮಿತ್ತ ಬೀದರ್‌ಗೆ ತೆರಳಿದ್ದರಿಂದ ಸಭೆಯಲ್ಲಿ ಹಾಜರಾದ ಸದಸ್ಯರುಗಳ ಪೈಕಿ ಓರ್ವರನ್ನು ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಲು ಆಯ್ಕೆಮಾಡಬೇಕೆಂದು ವಿನಂತಿಸಿದರು.

ಸಭೆಯು ಪ್ರಧಾನ ಕಾರ್ಯದರ್ಶಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರನ್ನು ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಲು ಸರ್ವಾನುಮತದ ನಿರ್ಣಯ ಕೈಗೊಂಡಿತು.

ಪ್ರಧಾನ ಕಾರ್ಯದರ್ಶಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರು ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ 1: ದಿನಾಂಕ: 04-04-2005 ರಂದು ಜರುಗಿದ ಮಂಡಳಿಯ ದ್ವಿತೀಯ ಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು.**

ದಿನಾಂಕ: 04-04-2005 ರಂದು ಜರುಗಿದ ಮಂಡಳಿಯ ದ್ವಿತೀಯ ಸಭೆಯ ನಡವಳಿಗಳನ್ನು ಯಾವುದೇ ಬದಲಾವಣೆಗಳಿಲ್ಲದೆ ಓದಿ ದಾಖಲಿಸಲಾಯಿತು.

**ವಿಷಯ 2: ದ್ವಿತೀಯ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮವನ್ನು ಪರಿಶೀಲಿಸುವುದು**

1. **ಟಾಟಾ ಸುಮೋ ವಾಹನ ಖರೀದಿಸಿದ ಬಗ್ಗೆ :**
   ಮಂಡಳಿಯ ದ್ವಿತೀಯ ಸಭೆಯಲ್ಲಿ ರೂ.5.25 ಲಕ್ಷ ವೆಚ್ಚದಲ್ಲಿ ಒಂದು ಟಾಟಾಸುಮೋ ವಾಹನವನ್ನು ಖರೀದಿಸಲು ಮಂಜೂರಾತಿ ನೀಡಲಾಗಿತ್ತು. ಆದರೆ ಸಮಗ್ರವಿಮೆ ಮತ್ತು ರಸ್ತೆ ತೆರಿಗೆ ಪಾವತಿಸಬೇಕಾದ್ದರಿಂದ ಹೆಚ್ಚುವರಿಯಾಗಿ ರೂ.51,677 ವೆಚ್ಚ ಆಗಿರುವ ಬಗ್ಗೆ ಸದಸ್ಯ ಕಾರ್ಯದರ್ಶಿ ಸಭೆಯ ಗಮನಕ್ಕೆ ತಂದಾಗ ಈ ಹೆಚ್ಚುವರಿ ವೆಚ್ಚಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿ ನೀಡಿತು.

**ವಿಷಯ 3: ಕರ್ನಾಟಕ ಜೀವವೈವಿಧ್ಯ ನಿಯಮಗಳು, 2005ರ ಕರಡನ್ನು ಅಂಗೀಕರಿಸುವುದು**

ಸಭೆಯು ಕರಡು ನಿಯಮಗಳನ್ನು ವಿವರವಾಗಿ ಪರಿಶೀಲಿಸಿ, ಚರ್ಚಿಸಿ ಈ ಕೆಳಗಿನ ಕೆಲವು ನಿಯಮಗಳನ್ನು ಸೇರ್ಪಡಿಸಲು ನಿರ್ಣಯಕೈಗೊಂಡಿತು.

1. ನಿಯಮ 12 (3)ರಲ್ಲಿ ಪರಿಣಿತ ಸಮಿತಿಯ ಅವಧಿಯನ್ನು 3 ವರ್ಷಗಳಿಗೆ ಸೀಮಿತಗೊಳಿಸುವುದು.

2. ನಿಯಮ 13ರ ಶೀರ್ಷಿಕೆಯನ್ನು ಮಂಡಳಿಯ ಸಾಮಾನ್ಯ ಪ್ರಕಾರ್ಯಗಳೆಂದು ಇರುವುದನ್ನು ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳೆಂದು ಬದಲಿಸುವುದು
3. ನಿಯಮ 22ರ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆಯ ನಂತರ ಈ ಸಮಿತಿಗಳ ಕಾರ್ಯದರ್ಶಿಗಳನ್ನಾಗಿ ಈ ಕೆಳಗಿನವರನ್ನು ನೇಮಿಸುವ ಬಗ್ಗೆ ಅಡಕಗೊಳಿಸುವುದು
   i. ಗ್ರಾಮ ಪಂಚಾಯತಿ – ಕಾರ್ಯದರ್ಶಿ
   ii. ತಾಲ್ಲೂಕ ಪಂಚಾಯತಿ – ಕಾರ್ಯನಿರ್ವಹಣಾಧಿಕಾರಿ
   iii. ಜಿಲ್ಲಾ ಪಂಚಾಯತಿ – ಮುಖ್ಯ ಕಾರ್ಯನಿರ್ವಹಣಾಧಿಕಾರಿ
   iv. ಪುರಸಭೆ / ನಗರಸಭೆ – ಮುಖ್ಯಾಧಿಕಾರಿ
   v. ಮಹಾನಗರ ಪಾಲಿಕೆ – ಆಯುಕ್ತರು
4. ನಿಯಮ 23 ರ ಸ್ಥಳೀಯ ಜೀವವೈವಿಧ್ಯ ನಿಧಿಯ ಶೀರ್ಷಿಕೆಯಡಿ ಈ ನಿಧಿಯನ್ನು ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಜಂಟಿ ಸಹಿಯೊಂದಿಗೆ ತೆಗೆಯುವ ಅಧಿಕಾರ ನೀಡುವುದು.

ಈ ಮೇಲಿನ ಮಾರ್ಪಾಡುಗಳೊಂದಿಗೆ ಸಭೆಯು ಕರಡು ಕರ್ನಾಟಕ ಜೀವವೈವಿಧ್ಯ ನಿಯಮಾವಳಿಗಳು,2005ಕ್ಕೆ ಅನುಮೋದನೆ ನೀಡಿತು. ಈ ನಿಯಮಾವಳಿಗಳನ್ನು ಶಾಸನ ರೂಪದಲ್ಲಿ ತರಲು ಅನುಕೂಲವಾಗುವಂತೆ ಸರ್ಕಾರಕ್ಕೆ ಕಳುಹಿಸಿಕೊಡಲೂ ನಿರ್ಣಯಿಸಲಾಯಿತು.

**ವಿಷಯ 4 : ಮಂಡಳಿಯಲ್ಲಿ ಪರಿಣಿತ ಸಮಿತಿಗಳನ್ನು ರಚಿಸುವ ಬಗ್ಗೆ**

ಮಂಡಳಿಯಲ್ಲಿ ಕೃಷಿ ಮತ್ತು ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ, ಔಷಧೀಯ ಸಸ್ಯಗಳು ಮತ್ತು ಬೌದ್ಧಿಕ ಹಕ್ಕುಸ್ವಾಮ್ಯಗಳ ಪರಿಣಿತ ಸಮಿತಿಗಳಿಗೆ ತಜ್ಞರ ಪಟ್ಟಿಯನ್ನು ಅನುಬಂಧ II ರಲ್ಲಿ ನೀಡಿದಂತೆ ರಚಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಈ ತೀರ್ಮಾನವನ್ನು ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಗಮನಕ್ಕೆ ಸಹ ತಂದು ಅವರ ಅನುಮೋದನೆಯನ್ನು ಸಹ ಪಡೆಯುವುದು ಸೂಕ್ತವೆಂದು ಸಭೆ ತೀರ್ಮಾನಿಸಿತು.

**ವಿಷಯ 5 : ಔಷಧಿ ಸಸ್ಯಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಿರ್ಬಂಧಕ ಕ್ರಮಗಳನ್ನು ಜಾರಿಗೊಳಿಸುವುದು**

ಬೇಡಿಕೆ ಇರುವ ಔಷಧಿ ಸಸ್ಯಗಳು ಅತಿಯಾಗಿ ಕೊಯ್ಲು ಆಗುತ್ತಿರುವ ಬಗ್ಗೆ ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದಾಗ ಯಾವ ಯಾವ ಔಷಧೀಯ ಸಸ್ಯಗಳು ಅತಿಯಾಗಿ ಕೊಯ್ಲಾಗುತ್ತಿವೆ ಮತ್ತು ಅವುಗಳ ಬಳಕೆಯ ಬಗ್ಗೆ ಯಾವ ರೀತಿಯ ನಿರ್ಬಂಧಗಳನ್ನು ವಿಧಿಸಬಹುದು ಎಂಬುದರ ಬಗ್ಗೆ ಸೂಕ್ತ ಧೋರಣೆಯ ಕರಡನ್ನು ತಯಾರಿಸುವ ವಿಷಯವನ್ನು ಔಷಧೀಯ ಸಸ್ಯಗಳ ಪರಿಣಿತ ಸಮಿತಿಗೆ ವಹಿಸಲು ತೀರ್ಮಾನಿಸಲಾಯಿತು. ಧೋರಣೆಯ ಕರಡಿನ ರೂಪುರೇಷೆ (Terms of reference) ಮತ್ತು ಇತರ ಅವಶ್ಯಕ ಮಾಹಿತಿಯನ್ನು ಶ್ರೀ ದರ್ಶನ್ ಶಂಕರ್, FRLHT ಇವರು ನೀಡುವುದಾಗಿ ತಿಳಿಸಿದರು.

**ವಿಷಯ 6 : ಮಂಡಳಿಗೆ 2005-06ನೇ ಸಾಲಿನಲ್ಲಿ ರೂ. 500 ಲಕ್ಷ ಅನುದಾನ ಮಂಜೂರಾತಿ ಬಗ್ಗೆ**

ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಕಳೆದೆರಡು ವರ್ಷಗಳಿಂದ ರಾಜ್ಯಸರ್ಕಾರದಿಂದ ಕೇವಲ ರೂ. 20 ಮತ್ತು 28 ಲಕ್ಷಗಳ ಅನುದಾನ ನೀಡಿದ್ದು ಈ ಮೊತ್ತವು ಆಡಳಿತ ಮತ್ತು ವ್ಯವಸ್ಥಾಪಕ ಖರ್ಚುವೆಚ್ಚಗಳಿಗೆ ಮಾತ್ರ ಸಾಕಾಗುತ್ತಿದ್ದು ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರುವ ಬಗ್ಗೆ ವಿವರಿಸುತ್ತಾ ಜೀವವೈವಿಧ್ಯ ಕಾಯಿದೆ ಪ್ರಕಾರ ಮಂಡಳಿಯು ಕೈಗೊಳ್ಳಬೇಕಾದ ಕಾರ್ಯಚಟುವಟಿಕೆಗಳಿಗಾಗಿ ರೂ. 500 ಲಕ್ಷದ ಯೋಜನೆಯನ್ನು ಸಭೆಗೆ ವಿವರಿಸಿ ಈ ಬಗ್ಗೆ ಸೂಕ್ತ ನಿರ್ಣಯ ಕೈಗೊಂಡಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಹೆಚ್ಚುವರಿ ಅನುದಾನ ಪಡೆಯಬಹುದೆಂದು ತಿಳಿಸಿದರು. ಈ ಬಗ್ಗೆ ಪ್ರಧಾನ ಕಾರ್ಯದರ್ಶಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇವರು ರಾಜ್ಯ ಸರ್ಕಾರದಿಂದ ಈ ಯೋಜನೆಗಳಿಗೆ ಯಾವುದೇ ಅನುದಾನವನ್ನು ಮಂಜೂರು ಮಾಡಲು ಹಣಕಾಸು ಇಲಾಖೆ ಒಪ್ಪಲಾರದೆಂದು ಆದರೆ ಈ ಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ವಿವಿಧ ಯೋಜನೆಗಳನ್ನು ಮಂಡಳಿಯು ತಯಾರಿಸಿ ಕಳುಹಿಸಿದಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಅಥವಾ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಹಣಕಾಸಿನ ನೆರವನ್ನು ಪಡೆಯಬಹುದೆಂದು ತಿಳಿಸಿದರು.

**ವಿಷಯ 7 : ಪ್ರಾಣಿಶಾಸ್ತ್ರ ಹಾಗೂ ಸಸ್ಯಶಾಸ್ತ್ರ ವಿಷಯಗಳ ರೀಡರ್ /ಸಹಪ್ರಾಧ್ಯಾಪಕರ ಹುದ್ದೆಗಳನ್ನು ನಿಯೋಜನೆ ಮೇಲೆ ಭರ್ತಿಗೊಳಿಸುವ ಬಗ್ಗೆ**

ಮಂಡಳಿಯಲ್ಲಿ ಖಾಲಿಇರುವ ಪ್ರಾಣಿಶಾಸ್ತ್ರ ಹಾಗೂ ಸಸ್ಯಶಾಸ್ತ್ರ ವಿಷಯಗಳ ರೀಡರ್ /ಸಹಪ್ರಾಧ್ಯಾಪಕರ ಹುದ್ದೆಗಳಿಗೆ ಸರ್ಕಾರದಿಂದ ಕಳುಹಿಸಲಾದ ಅರ್ಹಅಭ್ಯರ್ಥಿಗಳಲ್ಲಿ ಈ ಕೆಳಗಿನವರನ್ನು ಅವರ ಹೆಸರಿನ ಮುಂದೆ ಸೂಚಿಸಲಾದ ಹುದ್ದೆಗೆ ನಿಯೋಜನೆ ಮೇಲೆ ಪಡೆಯಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

1. ಡಾ॥ ಬಸಲಿಂಗ ಬಸಪ್ಪ ಹೊಸಟ್ಟಿ – ರೀಡರ್ /ಸಹಪ್ರಾಧ್ಯಾಪಕ – ಪ್ರಾಣಿಶಾಸ್ತ್ರ
2. ಡಾ॥ ಟಿ.ಸಿ.ತಾರಾನಾಥ್ – ರೀಡರ್ /ಸಹಪ್ರಾಧ್ಯಾಪಕ – ಸಸ್ಯಶಾಸ್ತ್ರ

**ವಿಷಯ 8 : ಮಂಡಳಿಯ ಅಧಿಕಾರಿಗಳಿಗೆ ಸಂಚಾರಿ ದೂರವಾಣಿ ಸೌಲಭ್ಯ ಒದಗಿಸುವ ಬಗ್ಗೆ**

ಮಂಡಳಿಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸದಸ್ಯ ಕಾರ್ಯದರ್ಶಿ, ಕಾರ್ಯನಿರ್ವಹಣಾಧಿಕಾರಿಗಳು ಹಾಗು ರೀಡರ್ /ಸಹಪ್ರಾಧ್ಯಾಪಕರುಗಳಿಗೆ ನಿವಾಸದ ಸ್ಥಿರ ದೂರವಾಣಿ ಪಡೆಯಲು ಅರ್ಹರಿದ್ದರೂ ನೀಡಿರದ ಕಾರಣ ಅದರ ಬದಲಾಗಿ ಈ ಅಧಿಕಾರಿಗಳಿಗೆ ಸಂಚಾರಿ ದೂರವಾಣಿ ಸೌಲಭ್ಯವನ್ನು ಮಾಹೆಯಾನ ರೂ. 750ಕ್ಕೆ ಸೀಮಿತಗೊಳಿಸಿ ನೀಡಲು ಸಭೆಯು ಸರ್ವಾನುಮತದ ನಿರ್ಣಯ ಕೈಗೊಂಡಿತು.

**ವಿಷಯ 9 : ಕುವೆಂಪು ಸ್ಮಾರಕ ಜೈವಿಕ ವೈವಿಧ್ಯ ಉದ್ಯಾನದಲ್ಲಿ ಹಮ್ಮಿಕೊಳ್ಳಬಹುದಾದ ಇತರ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವ ಬಗ್ಗೆ**

ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಕುವೆಂಪು ಸ್ಮಾರಕ ಜೈವಿಕ ವೈವಿಧ್ಯ ಉದ್ಯಾನ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರವು ನೀಡಿರುವ ರೂ. 1.00 ಕೋಟಿ ಅನುದಾನದಲ್ಲಿ ಈವರೆಗೆ

ಕೈಗೊಂಡ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿ ಬಾಕಿ ಉಳಿದಿರುವ ರೂ.47.99 ಲಕ್ಷ ಮೊತ್ತದಲ್ಲಿ ಈ ಕೆಳಗಿನ ಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಪ್ರಸ್ತಾವಿಸಿದರು.

1. ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯ ಸಮೀಪದ ಚಿಪ್ಪಲಗುಡ್ಡ ಗ್ರಾಮ ಪ್ರದೇಶದಲ್ಲಿ ಹರಿಯುತ್ತಿರುವ ತುಂಗಾ ನದಿಯ ಪ್ರದೇಶದಲ್ಲಿ ಅತೀ ವಿಶಿಷ್ಟವಾದ ಆಟದ ಮೀನು ಮಹಾಶೀರ್ ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಕೃತವಾಗಿರುವುದರಿಂದ ಈ ಪ್ರದೇಶವನ್ನು ಕುವೆಂಪು ಮತ್ಸ್ಯಧಾಮವಾಗಿ ಘೋಷಿಸಲು ಮೀನುಗಾರಿಕಾ ನಿರ್ದೇಶಕರು ಬೆಂಗಳೂರು ಇವರಿಗೆ ವಿನಂತಿಸಿದ ಬಗ್ಗೆ ಹಾಗೂ ಈ ಪ್ರದೇಶದಲ್ಲಿ ರೂ. 5.00 ಲಕ್ಷ ವೆಚ್ಚದಲ್ಲಿ ಸಂರಕ್ಷಣಾ ಕಾರ್ಯಗಳನ್ನು ಹಮ್ಮಿಕೊಳ್ಳಲು ಅವರು ಕಳುಹಿಸಿರುವ ಪ್ರಸ್ತಾವನೆಯನ್ನು ವಿವರಿಸಿದರು.

2. ಕುವೆಂಪು ಸ್ಮಾರಕ ಜೈವಿಕ ಧಾಮ ಪ್ರದೇಶದಲ್ಲಿ ಬರುವ ಗ್ರಾಮಪಂಚಾಯತುಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ಸ್ಥಾಪಿಸಿ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸುವುದು ಸೇರಿದಂತೆ ಸಮಗ್ರ ಜೈವಿಕ ಸಂಪನ್ಮೂಲಗಳ ದಾಖಲೀಕರಣಕ್ಕಾಗಿ ರೂ. 10.00 ಲಕ್ಷದ ಪ್ರಸ್ತಾವನೆಯನ್ನು ವಿವರಿಸಿದರು.

3. ಬಾಕಿ ಉಳಿಯುವ ರೂ. 33.00 ಲಕ್ಷಕ್ಕೆ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳನ್ನು ಸೂಚಿಸುವಂತೆ ವಿನಂತಿಸಿದರು.

ಸಭೆಯು ಈ ಬಗ್ಗೆ ವಿವರವಾಗಿ ಚರ್ಚಿಸಿ ಕ್ರಮ ಸಂಖ್ಯೆ 1 ಮತ್ತು 2 ರ ಪ್ರಸ್ತಾವನೆಗಳಿಗೆ ಅನುಕ್ರಮವಾಗಿ ರೂ. 5.00 ಲಕ್ಷ ಹಾಗೂ ರೂ. 10.00 ಲಕ್ಷಗಳಿಗೆ ಮಂಜೂರಾತಿ ನೀಡಿತು. ಉಳಿದ ಮೊತ್ತದಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳನ್ನು ನಿರ್ಣಯಿಸಲು ಮಂಡಳಿಯ ಸದಸ್ಯರುಗಳನ್ನು ಕುವೆಂಪು ಸ್ಮಾರಕ ಜೈವಿಕ ವೈವಿಧ್ಯ ಧಾಮಕ್ಕೆ ಪ್ರವಾಸ ಕರೆದೊಯ್ದು ಆಗಿರುವ ಪ್ರಗತಿಯ ಬಗ್ಗೆ ಪರಿಚಯಿಸಿದಲ್ಲಿ ಕೈಗೊಳ್ಳಬೇಕಾದ ಯೋಜನೆಗಳನ್ನು ಸೂಚಿಸಲು ಅನುಕೂಲ ಆಗುವುದೆಂದು ಮತ್ತು ಸಾಧ್ಯವಾದರೆ ಮಂಡಳಿಯ ಅಧ್ಯಕ್ಷರೊಂದಿಗೆ ಚರ್ಚಿಸಿ ಮುಂದಿನ ಸಭೆಯನ್ನು ಅಲ್ಲಿಯೇ ಏರ್ಪಡಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು.

**ವಿಷಯ 10 : ಕರ್ನಾಟಕದಲ್ಲಿ ಜೀವವೈವಿಧ್ಯ ಮಾಹಿತಿ ತಂತ್ರಜಾಲ ಅಭಿವೃದ್ಧಿಪಡಿಸುವ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.**

ಕಳೆದ ಸಭೆಯಲ್ಲಿ ತೀರ್ಮಾನಿಸಿದಂತೆ ಈ ಬಗ್ಗೆ ರಚಿಸಲಾದ ಡಾ|| ಮಾಧವ ಗಾಡ್ಗಿಲ್ ಅವರ ಅಧ್ಯಕ್ಷತೆಯ ಸಮಿತಿಯು ನಾಲ್ಕು ಪರಿಣಿತರ ಸಭೆಗಳನ್ನು ಕರೆದು ಚರ್ಚಿಸಿ ತಯಾರಿಸಿದ ಯೋಜನೆಯನ್ನು ಸಭೆಯಲ್ಲಿ ಮಂಡಿಸಲಾಯಿತು. ಯೋಜನೆಯ ವಿವರಗಳನ್ನು ಡಾ|| ಮಾಧವ ಗಾಡ್ಗಿಲ್ ರವರು ಸಂಕ್ಷಿಪ್ತವಾಗಿ ವಿವರಿಸಿದರು. ಈ ಬಗ್ಗೆ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಚರ್ಚಿಸಿ ರೂ.178.48 ಲಕ್ಷದ ಯೋಜನೆಗೆ ಸರ್ವಾನುಮತದಿಂದ ಅನುಮೋದನೆ ನೀಡಿದ್ದಲ್ಲದೆ

ಹಣಕಾಸಿನ ನೆರವಿಗಾಗಿ ಯೋಜನೆಯನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈಗೆ ಸಲ್ಲಿಸಲು ಒಪ್ಪಿಗೆ ನೀಡಿತು.

**ವಿಷಯ 11 : ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ತರಬೇತಿ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿ ಬಗೆಗಿನ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.**

ಜೈವಿಕವೈವಿಧ್ಯ ಅಧಿನಿಯಮ,2002ರ ಪ್ರಕಾರ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ತರಬೇತಿ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನ ನೀಡಬೇಕಿರುವುದರಿಂದ ತಲಾ ಸಮಿತಿಗೆ ಮೂಲಭೂತ ಸೌಕರ್ಯಗಳಿಗಾಗಿ ರೂ.40,000 ಹಾಗೂ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಗೆ ರೂ.60,000 ಹೀಗೆ ಒಟ್ಟು ರೂ.100,000 ನೀಡುವ ಯೋಜನೆಯ ವಿವರಗಳನ್ನು ಸದಸ್ಯ ಕಾರ್ಯದರ್ಶಿಯವರು ಸಭೆಗೆ ಮಂಡಿಸುತ್ತಾ ರಾಜ್ಯದಲ್ಲಿ ಪ್ರಾಯೋಗಿಕವಾಗಿ 60 ಗ್ರಾಮ ಪಂಚಾಯತಿಗಳಿಗೆ ಈ ಸೌಲಭ್ಯ ನೀಡಲು ರೂ.60.00 ಲಕ್ಷ ಅವಶ್ಯಕವಿರುತ್ತದೆ ಎಂದು ತಿಳಿಸಿದರು. ಸಭೆಯು ಸದರಿಯೋಜನೆಗೆ ಅಂಗೀಕಾರ ನೀಡಿತು. ಇಂತಹ ಯೋಜನೆಗಳನ್ನು ಹಮ್ಮಿಕೊಳ್ಳಲು ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ದೊರೆಯುತ್ತಿಲ್ಲವಾದ್ದರಿಂದ ಪ್ರಸ್ತಾವಿತ ಯೋಜೆನಗೆ ಹಣಕಾಸಿನ ನೆರವನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈಗೆ ಸಲ್ಲಿಸಲು ಸಭೆಯು ಸರ್ವಾನುಮತದ ನಿರ್ಣಯ ಕೈಗೊಂಡಿತು.

**ವಿಷಯ 12 : ಅಧ್ಯಕ್ಷರ ಅನುಮತಿಯೊಂದಿಗೆ ಮಂಡಿಸಲಾದ ಇತರ ವಿಷಯ**

**1. ಮಂಡಳಿಯ ಸಹಯೋಗದೊಂದಿಗೆ ಮನೆಯಂಗಳದಲ್ಲಿ ಔಷದೀಯ ಸಸ್ಯಗಳನ್ನು ಬೆಳೆಸುವ ಯೋಜನೆ ಅನುಷ್ಠಾನದ ಬಗ್ಗೆ.**

ಡಾ॥ ದರ್ಶನ್ ಶಂಕರ್ ಫೌಂಡೇಷನ್ ಫಾರ್ ರಿವೈಟಲೈಜೇಷನ್ ಆಫ್ ಲೋಕಲ್ ಹೆಲ್ತ್ ಟ್ರೆಡಿಷನ್ (FRLHT) ಬೆಂಗಳೂರು ಇವರು ಮಾನವ, ಜಾನುವಾರು ಮತ್ತು ಬೆಳೆಗಳ ಪ್ರಾಥಮಿಕ ಆರೋಗ್ಯ ರಕ್ಷಣೆಗೆ ಉಪಯೋಗಿಕಾರಿಯಾದ ಹಲವು ಔಷದೀಯ ಸಸ್ಯಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶದ ಮನೆಗಳಲ್ಲಿ ಬೆಳೆಸುವ ಕಾರ್ಯಕ್ರಮವನ್ನು ಮಂಡಳಿಯ ಸಹಯೋಗದೊಂದಿಗೆ ಹಮ್ಮಿಕೊಳ್ಳುವ ಬಗ್ಗೆ ಯೋಜನೆಯೊಂದನ್ನು ಸಭೆಗೆ ಮಂಡಿಸಿದರು. ಈ ಕಾರ್ಯ ಶ್ಲಾಘನೀಯವಾಗಿದ್ದು ಯೋಜನೆ ಅನುಷ್ಠಾನಕ್ಕೆ ಸೂಕ್ತ ಹಣಕಾಸಿನ ನೆರವನ್ನು ಪಡೆಯುವ ಬಗ್ಗೆ ಯೋಜನೆಯನ್ನು ತಯಾರಿಸಿ ಮುಂದಿನ ಸಭೆಗೆ ಮಂಡಿಸುವಂತೆ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಮುಕ್ತಾಯವಾದವು.

ಪ್ರಧಾನ ಕಾರ್ಯದರ್ಶಿ
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಹಾಗೂ ತೃತೀಯ ಸಭೆಯ ಅಧ್ಯಕ್ಷರು.

# ಅನುಬಂಧ - I

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
   ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

2. ಸರ್ಕಾರದ ಕಾರ್ಯದರ್ಶಿಗಳು
   ಪರಿಸರ ಮತ್ತು ಜೀವಿಶಾಸ್ತ್ರ
   ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

3. ನಿರ್ದೇಶಕರು
   ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ

4. ಪ್ರೊ.ಮಾಧವ್ ಗಾಡ್ಗಿಲ್
   ಸೆಂಟರ್ ಆಫ್ ಏಕಾಲಜಿಕಲ್ ಸೈನ್ಸಸ್ (CES)
   ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್,

5. ಡಾ|| ದ್ವಾರಕೀನಾಥ್
   ಮಾಜಿ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ
   ನಂ.143, 6ನೇ ಮುಖ್ಯರಸ್ತೆ, 4ನೇ ಬ್ಲಾಕ್
   ಜಯನಗರ, ಬೆಂಗಳೂರು.

6. ಪ್ರೊ.ಹೆಚ್.ಶರತ್‌ಚಂದ್ರ
   ಮೈಕ್ರೊ ಬಯಾಲಜಿ ಅಂಡ್ ಸೆಲ್
   ಬಯಾಲಜಿ ಲ್ಯಾಬೊರೇಟರಿ,
   ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್,

7. ಡಾ|| ಎಂ.ಎಸ್.ಮಹಾಲಿಂಗಪ್ಪ
   ಸಿದ್ದರಾಮ ಕೃಪ, ಹುಲ್ಲೇಕೆರೆ 572 215
   ತುರುವೇಕೆರೆ ತಾಲ್ಲೂಕು,
   ತುಮಕೂರು ಜಿಲ್ಲೆ,

8. ಡಾ|| ದರ್ಶನ್ ಶಂಕರ್
   ಫೌಂಡೇಷನ್ ಫಾರ್ ರಿವೈಟಲೈಜೇಷನ್ ಆಫ್ ಲೋಕಲ್
   ಹೆಲ್ತ್ ಟ್ರೆಡಿಷನ್ (FRLHT),

9. ಸದಸ್ಯ ಕಾರ್ಯದರ್ಶಿ
   ಕರ್ನಾಟಕ ಜೀವವೈವಿಧ್ಯ ಮಂಡಳಿ

# ಅನುಬಂಧ - II

## 1) Expert Committee on Agriculture and Horticulture:

| | | |
|---|---|---|
| 1) | **Dr. Kulkarni**<br>Professor and Head<br>Dept. of Plant Breeding and Genetics<br>GKVK, UAS(B)<br>Bangalore- 65. | Chairman |
| 2) | **Dr. S. Ganeshan**<br>Principal Scientist<br>Division of Plant Genetic Resources<br>IIHR, Hessaraghatta<br>Bangalore- 89. | Member |
| 3) | **Dr. Vanaja Ramprasad**<br>Green foundation<br>Bangalore- 76. | Member |
| 4) | **Dr. Narayana Reddy**<br>Progressive farmer<br>Srinivasapura Village<br>Hanabe Post - 561 203<br>Doddaballapur Taluk<br>Bangalore Rural District. | Member |
| 5) | **Dr. H. Nagaraj**<br>Executive Officer(Horticulture)<br>Karnataka Biodiversity Board,<br>Bangalore. | Convener |

## 2) Expert Committee on Animal Husbandry & Fisheries:

| | | |
|---|---|---|
| 1. | **Dr. M.G. Govindaiah**<br>Dept.of Animal Breeding Genetics & Statistics,<br>Veterinary College,<br>UAS(B)<br>Bangalore- 24. | Chairman |
| 2. | **Dr. G. Tirumalai**<br>Scientist E & Officer in charge<br>Southern Regional Station<br>Zoological Survey of India<br>Chennai - 25. | Member |
| 3. | **Sri. H.N. Chandrashekharaiah,**<br>Society for Advancement of Aquaculture<br>KFDC Canteen, Cubbon Park<br>Bangalore- 01. | Member |
| 4. | **Dr. Obi Reddy**<br>Principal Scientist,<br>National Dairy Research Institute<br>Bangalore- 30. | Member |
| 5. | **Sri. Gangadhara V. Maddikery**<br>Executive Officer (Fisheries)<br>Karnataka Biodiversity Board, Bangalore. | Convener |

## 3) EXPERT COMMITTEE ON INTELLECTUAL PROPERTY RIGHTS (IPR):

| | | |
|---|---|---|
| 1. | **Dr. M.H.Swaminath I.F.S.,**<br>Director General<br>EMPRI, Urban Uco Park, 100 ft. Road<br>Peenya Industrial Area<br>IIIrd Phase<br>Bangalore- 58. | Chairman |
| 2. | **Dr. T. Ramakrishna,**<br>Associate Professor, CIPRA,<br>National Law School of India University,<br>Bangalore- 56. | Member |
| 3. | **Dr. Anindya Sircar**<br>Intellectual Property Rights<br>Biocon India Ltd.,<br>20th KM. Hosur Road<br>Electronic City Post<br>Bangalore -100. | Member |
| 4 | **Mrs.Sangeetha Udgaonkar**<br>Advocate,<br># 1, Mallige<br>National Centre for Biological Sciences Campus<br>GKVK<br>Bangalore- 65. | Member |
| 5. | **Reader/Associate Professor (Zoology/Botany)**<br>Karnataka Biodiversity Board<br>Bangalore- 03. | Convener |

## 4) EXPERT COMMITTEE ON MEDICINAL PLANTS:

| | | |
|---|---|---|
| 1. | **Dr. Subhash C.Hiremath**<br>Prof. & Chairman<br>P.G. Dept. of Botany<br>Karnataka University<br>Pavate Nagar<br>Dharwad – 580 003. | Chairman |
| 2. | **Dr.Gangadharan**<br>Jt.Director,F.R.L.H.T., Attur-Post<br>Bangalore- 54. | Member |
| 3. | Sri. E.V.S. Prakash Rao,<br>Central Institute of Medicinal & Aromatic Plants<br>Allalasandra<br>Bangalore. | Member |
| 4. | **Dr. V .K. Haridasan**<br>Professor of Botany<br>Dept.of Post Graduate Studies<br>St. Joseph"s College<br>Bangalor-01 | Member |
| 5. | **Dr. Satyanarayana Bhat**<br>Executive Officer(ISM&H)<br>Karnataka Biodiversity Board<br>Bangalore. | Convener |